Defective Entries In Raseedi patta'

250. Sri A. R. PANCHAGAVI (Arbhavi).

Will the Minister for Revenue be pleased to state.—

(*a*) the number of Rasheeti Patta' distributed in the State ;

(*b*) whether Government is aware that these Pattas are not signed by the talatis and that they do not contain any crop entry or tenancy entry and consist of several other defects ;

(*c*) whether it has come to the notice of Government that these Pattas will not serve as authoritative document for giving facilities to cultivators nor do they prevent corruption prevailing if they are issued in the present form ;

(*d*) the steps the Government has taken to improve and make Pattas reliable and foolproof ?

Sri H. V. KOUJALGI (Minister for Revenue).—

(*a*)—

Divisionwise distribution

Mysore Division	...	24,503
Belgaum Division	...	13,862
Bangalore Division	...	39,080
Gulbrga Division	...	11,990

(*b*) No. The existence of tenancies is noted at page 6 of the book. No provision has been made for making entries of crops as the entries would be voluminous and not essential for decision of the rights of the parties.

(*c*) No.

(*d*) Standing Orders have been issued that inspecting Officers should call for and check the correctness of Pattas issued to the ryots and give instructions to the Village Officers for filling the columns correctly.

ಶ್ರೀ ಎ. ಆರ್. ಪಂಚಗಾವಿ.—ಈಗೇನು ಪಟ್ಟೆಗಳನ್ನು ಹಂಚಿದೆ ಅದು ಎಲ್ಲ ಜಮೀನುದಾರರಿಗೂ ಹಂಚಿದೆಯೋ ಅಥವ ಕೆಲವರಿಗೆ ಮಾತ್ರ ಹಂಚಿದೆಯೋ ?

ಶ್ರೀ ಎಚ್. ವಿ. ಕೌಜಲಗಿ.—ಈಗ ಕೆಲವರಿಗೆ ಹಂಚಲಾಗಿದೆ, ಇನ್ನೂ ಹಂಚುವ ಕೆಲಸ ವಾಗುತ್ತಿದೆ.

Sri J. P. SARWESH.—May I know the total number of Pattas that have to be distributed throughout the State ? Why is it that in Gulbarga Division, the distribution work is very slow ?

Sri H. V. KOUJALGI.—First the record of rights will have to be written up-to-date. They will have to write Form No. 16. Then Pattas will have to be got distributed. In some villages, the record of rights is up-to-date. In some villages the process is going on.

ಶ್ರೀ ಎಂ. ಎಸ್. ಕೃಷ್ಣನ್.—(ಬಿ) ಪ್ರಶ್ನೆಯಲ್ಲಿರುವಂತೆ ಕೆಲವು ನ್ಯೂನತೆಗಳಿವೆ. ಅವನ್ನು ಹೋಗಲಾಡಿಸಲು ಕ್ರಮ ತೆಗೆದುಕೊಳ್ಳುವಿರಾ ?

Sri H. V. KOUJALGI.—I think all the hon. Members have seen it and if any suggestions are made Government will definitely consider them.

ಶ್ರೀ ಎಂ. ಎಸ್. ಕೃಷ್ಣನ್.—ಟೆನೆಂಟ್ಸ್‌ಗೂ ಪಟ್ಟೆ ಕೊಡುವಿರಾ ?

ಶ್ರೀ ಎಚ್. ವಿ. ಕೌಜಲಗಿ.—ಜಮೀನು ಮಾಲೀಕರಿಗೆ ಮಾತ್ರ ಕೊಡಲಾಗುವುದು.

Sri C. K. RAJAIAH SHETTY.—Does the Hon. Minister mean to say that the tenant has no right to have his name entered ?

Sri H. V. KOUJALGI.—The name of the tenant is entered. If any hon. friend looks at form No. 16, it is specifically meant for tenants alone.

ಶ್ರೀ ಎಂ. ನಾಗಪ್ಪ.—ಗುಲ್ಬರ್ಗ ಡಿವಿಜನ್ನಿಗೆ ಕೊಟ್ಟಿರುವ 11,990 ಪಟ್ಟೆಗಳಲ್ಲಿ ರಾಯಚೂರು ಜಿಲ್ಲೆಗೆ ಎಷ್ಟು ಕೊಡಲಾಗಿದೆ ?

ಶ್ರೀ ಎಚ್. ವಿ. ಕೌಜಲಗಿ.—ಆ ವಿವರ ನನ್ನಲ್ಲಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಪಟ್ಟೆಗಳಿಗೆ ಎಂಟ್ರಿ ಮಾಡುವಾಗ ತಲಾಟಿಗಳು ವಿಪರೀತ ಲಂಚ ತೆಗೆದುಕೊಳ್ಳುವುದು ಗಮನಕ್ಕೆ ಬಂದಿದೆಯೇ ? ಹೀಗೆ ರೈತರಿಗೆ ತೊಂದರೆಮಾಡುತ್ತಿರುವುದರಿಂದ ಇದನ್ನು ಕಡಿಮೆ ಮಾಡಲು ಜಿಲ್ಲಾಧಿಕಾರಿಗಳಿಗೆ ಯಾವ ರೀತಿ ತಿಳುವಳಿಕೆ ಕೊಡಲಾಗಿದೆ ?

ಶ್ರೀ ಎಚ್. ಕೌಜಲಗಿ.—ಲಂಚ ತೆಗೆದುಕೊಳ್ಳುವುದು ನಮ್ಮ ಗಮನಕ್ಕೆ ಬಂದಿಲ್ಲ. ಉದಾಹರಣೆ ಕೊಟ್ಟರೆ ವಿಚಾರಮಾಡಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ತಲಾಟಿ ಎಂದರೆ ಯಾರು ? ನಮ್ಮ ಕಡೆ ತೋಟಿ ತಳವಾರರು ಎಂದು ಹೇಳುವರು.

Sri H. V. KOUJALGI.—In erstwhile Bombay Karnataka, they are called Talatis; in some parts of the State, they are called Shanubhogs; in some other parts they are called Karniks; yet in some other parts they are called Kulkarnis.

ಶ್ರೀ ಎ. ಆರ್. ಪಂಚಗಾವಿ.—ಟೆನೆಂಟ್ಸ್‌ಗೆ ಪಟ್ಟೆ ಕೊಡದಿರುವುದರಿಂದ ಅವರು ಸೊಸೈಟಿಗಳಲ್ಲಿ ಸಾಲ ಪಡೆಯಲು ತೊಂದರೆಯಾಗಿಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—ಅವರು ಫಾರಂ ನಂಬರು 16 ರ ಕಾಪಿ ತೆಗೆದುಕೊಂಡು ಉಪಯೋಗ ಮಾಡಿಕೊಳ್ಳಬಹುದು.

ಶ್ರೀ ವಿ. ಎನ್. ಪಾಟೀಲ್.—ಮೀನುಗೇರಿ ಗ್ರಾಮದಲ್ಲಿ ಶಿವಮೂರ್ತಿ ಎಂಬುವವರು ಅರ್ಜಿ ಕೊಟ್ಟು 3 ತಿಂಗಳಾದರೂ ಪಟ್ಟೆಕೊಟ್ಟಿಲ್ಲ. ಶಿವನಯ್ಯ ಎನ್ನುವವರ ತಂದೆ ಸತ್ತು 5 ವರ್ಷವಾದರೂ 500 ರೂಪಾಯಿಯನ್ನು ಖರ್ಚುಮಾಡಿದರೂ ಪಟ್ಟೆ ಸಿಕ್ಕಿಲ್ಲ. ಆದುದರಿಂದ 15 ದಿವಸ ಅಥವ ಒಂದು ತಿಂಗಳೊಳಗೆ ಅವರಿಗೆ ಪಟ್ಟೆ ದೊರೆಯುವಂತೆ ಭರವಸೆ ಕೊಡುತ್ತೀರಾ ?

ಶ್ರೀ ಎಚ್. ಎಂ. ಕೌಜಲಗಿ.—ಕಾಯಿದೆ ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಹೆಚ್ಚು ವಿವರ ಕೊಟ್ಟರೆ ಅಧಿಕಾರಿಗಳಿಗೆ ಕೂಡಲೆ ಬರೆಯುತ್ತೇನೆ.

ಶ್ರೀ ಎನ್. ವಿ. ಚನ್ನೇಗೌಡ.—ಪ್ರವಾಸ ಕಾಲದಲ್ಲಿ ಪಟ್ಟೆಯಲ್ಲಿ ನಮೂದಿಸಿರುವ ವಿವರಗಳು ಸರಿಯಾಗಿವೆಯೇ ಎಂದು ಚೆಕ್ ಮಾಡಿದ್ದೀರಾ ?

ಶ್ರೀ ಎಚ್. ಎ. ಕೌಜಲಗಿ.—ಇಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಪ್ರಭಾವಶಾಲಿ ರೈತರಿಗೆ ಪಟ್ಟೆ ಸಿಕ್ಕುತ್ತಿದೆ; ಸಣ್ಣ ರೈತರಿಗೆ ಸಿಕ್ಕುತ್ತಿಲ್ಲ. ಆದುದರಿಂದ ಎಲ್ಲರಿಗೂ ಸಿಕ್ಕುವಂತೆ ಮಾಡಲು ಭರವಸೆ ಕೊಡುವಿರಾ ?

ಶ್ರೀ ಎಚ್. ವಿ. ಕೌಜಲಗಿ.—ಹಿಡುವಳಿದಾರರೆಲ್ಲರಿಗೂ ಕೊಡಬೇಕೆಂದಿದೆ. ಹಂಚಿಕೆ ಮುರು ವಾಗಿದೆ, ಎಲ್ಲರಿಗೂ ಇನ್ನೂ ಕೊಟ್ಟಿಲ್ಲ, ಲಕ್ಷಾಂತರ ಕೊಡಬೇಕು, ಬರೆಯಲು ಕಾಲ ಬೇಕಾಗುವುದು ಬರೆದ ನಂತರ ಎಲ್ಲರಿಗೂ ಕೊಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಹಾತ್ಮ ಗಾಂಧಿಯವರ ಶತಮಾನೋತ್ಸವದ ಜ್ಞಾಪಕಾರ್ಥವಾಗಿ ಖಾಲಿ ಪಟ್ಟೆಗಳನ್ನು ಹಂಚಿ ಅವರಿಗೆ ಗೌರವ ತೋರಿಸಿರುವುದು, ಆ ರೀತಿ ಕೆಲವು ತಾಸಿಲ್ದಾರರು ಮಾಡಿ ಶತಮಾನೋತ್ಸವ ಆಚರಿಸಿರುವುದು ಗಮನಕ್ಕೆ ಬಂದಿದೆಯೇ ಅದನ್ನು ಗಮನಕ್ಕೆ ತಂದರೆ ಸಂಬಂಧಪಟ್ಟವರಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಎಚ್. ವಿ. ಕೌಜಲಗಿ.—ಖಾಲಿ ಪಟ್ಟೆ ಎಲ್ಲೂ ಕೊಟ್ಟಿಲ್ಲ. ಆದರೆ ಕೆಲವು ಕಡೆ ಎಲ್ಲಾ ಬರೆಯುವುದಕ್ಕಾಗಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕುಣಿಗಲು ತಾಲ್ಲೂಕು ತಾಸಿಲ್ದಾರರು ಅಕ್ಕೋಬರ್ ಎರಡರಲ್ಲಿ ಖಾಲಿ ಪಟ್ಟೆ ಹಂಚಿದ್ದಾರೆ. ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಉಪಾಧ್ಯಕ್ಷರು.—ವಿವರಗಳನ್ನು ತಿಳಿಸಿದರೆ ಕ್ರಮ ತೆಗೆದುಕೊಳ್ಳುವುದಾಗಿ ಆಗಲೇ ಹೇಳಿ ದ್ದಾರೆ.

ಶ್ರೀ ಬಾಪೂಗೌಡ.—ಎಲ್ಲರಿಗೂ ಎಷ್ಟು ದಿವಸಗಳಲ್ಲಿ ಪಟ್ಟೆ ಹಂಚಲಾಗುವುದು ?

ಶ್ರೀ ಎಚ್. ವಿ. ಕೌಜಲಗಿ.—ಎಷ್ಟೋ ಕಡೆ ಫಾರಂ ನಂಬರು 16 ಪೂರ್ತಿಯಾಗಿ ಬರೆದಿಲ್ಲ, ಇದಕ್ಕೆ ಕಾರಣವಿದೆ. ವಿಲೇಜ್ ಆಫೀಸರುಗಳಿಗೆ ಕೆಲಸ ಹೆಚ್ಚಾಗಿದೆ. ಅದಷ್ಟು ತೀವ್ರವಾಗಿ ಹಂಚುತ್ತೇವೆ.

ಶ್ರೀ ಎ. ಆರ್. ಪಂಚಗಾವಿ.—ಬೆಟರ್‌ಮೆಂಟ್ ಲೆವಿ ಮತ್ತು ಅಗ್ರಿಕಲ್ಚರರ್ ಇನ್‌ಕಂಟ್ಯಾಕ್ಸ್ ಎಂಟ್ರಿ ಇಲ್ಲದೆ ತೊಂದರೆಯಾಗಿದೆ, ಬೆಳೆ ವಿಚಾರ ಕೂಡ ಎಂಟ್ರಿ ಮಾಡಿಲ್ಲ. ಇವನ್ನೆಲ್ಲಾ ಎಂಟ್ರಿ ಮಾಡಲು ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಎಚ್. ವಿ. ಕೌಜಲಗಿ.—ಕ್ಯಾಪ್ ಎಂಟ್ರಿ ಮಾಡಿದರೆ ವಲ್ಯೂಮಿನಸ್ ಆಗುವುದು. ಸಾಧ್ಯವಾದಷ್ಟು ವಿವರ ಮಾತ್ರ ಎಂಟ್ರಿಮಾಡಿದೆ.

Breach of Contract in the construction of Court Buildings in Chitradurga

278. Sri H. SIDDAVEERAPPA (Harihar).—

Will the Minister for Public Works be pleased to state :—

(*a*) whether a firm called the Karnatak Construction Company had taken the contract for the construction of the Court Buildings in Chitradurga ;

(*b*) if so, the estimated value of the proposed building ;

(*c*) whether the said Company has failed to complete the work of the building in scheduled time and whether the P.W.D. authorities have fined the Company for breach of the contract ;

(*d*) the names and address of the partners of the Company ;

(*e*) the stage at which the contract is still pending ?

Sri BASAVARAJ MAGAVI (Deputy Minister for Public Works).—

(*a*) No, the Contractors are Messrs. Karnatak Traders.

(*b*) The estimated value of the work entrusted to the Contractors is Rs. 2.92 lakhs.